ಹಾಸನ ಜಿಲ್ಲೆಯಲ್ಲಿ ಮುಂದಿನ ವರ್ಷದಿಂದ ಹೆಂಡದ ಮಾರಾಟ ನಿಲ್ಲಿಸುವ ಬಗ್ಗೆ

೪೨. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಹಣಕಾಸು ಸಾಂಖ್ಯಿಕ ಹಣಕಾಸು ಮತ್ತು ಅಬಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಮುಂದಿನ ವರ್ಷದಿಂದ ಹೆಂಡದ ಮಾರಾಟವನ್ನು ನಿಲ್ಲಿಸುವಂತೆ ಜಿಲ್ಲೆಯ ಎಲ್ಲಾ ಶಾಸಕರುಗಳು ಸರ್ಕಾರಕ್ಕೆ ಮನವಿ ಸಲ್ಲಿಸಿರುವುದು ನಿಜವಲ್ಲವೆ?

ಆ) ಹಾಸನ ಜಿಲ್ಲಾ ಪರಿಷತ್ತಿನವರೂ ಸಹ ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿರುವುದು ನಿಜವಲ್ಲವೆ?

ಇ) ಜಿಲ್ಲೆಯಲ್ಲಿ ಸಾಕಷ್ಟು ಈಚಲು ಮರಗಳಿಲ್ಲದೆ ಕಲಬೆರಕೆ ಹೆಂಡ ಮಾರಾಟವಾಗುತ್ತಿದ್ದು, ಹೆಂಡ ಕುಡಿಯುವವರ ಆರೋಗ್ಯ ಕೆಡುತ್ತಿರುವುದು ಸರಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಹೆಂಡ ಮಾರಾಟವನ್ನು ನಿಲ್ಲಿಸಲು ಸರ್ಕಾರದವರು ಕೂಡಲೇ ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು ಸಾಂಖ್ಯಿಕ ಹಣಕಾಸು ಮತ್ತು ಅಬಕಾರಿ ಮಂತ್ರಿಗಳು).—

ಆ) ಹೌದು

ಆ) ಇದು ಸರ್ಕಾರದ ಗಮನಕ್ಕೆ ಬಂದಿಲ್ಲ.

ಇ) ೧೯೯೦–೯೧ನೇ ಅಬಕಾರಿ ವರ್ಷದಲ್ಲಿ ಹಾಸನ ಜಿಲ್ಲೆಯನ್ನು ಒಳಗೊಂಡಂತೆ ರಾಜ್ಯದ ಉಳಿದ ೧೩ ಜಿಲ್ಲೆಗಳ ಶೇಂದಿ ಮಾರಾಟದ ನಿಷೇದವನ್ನು ಜಾರಿಗೆ ತರಲು ಉದ್ದೇಶಿಸಿರುವ ಪ್ರಸ್ತಾವನೆಯೊಂದನ್ನು ಸರ್ಕಾರ ಪರಿಶೀಲಿಸುತ್ತಿದೆ,

ಹಾಸನ ಪಟ್ಟಣದ ಬೀರನಹಳ್ಳಿ ಕೆರೆಯಲ್ಲಿ ಹೌಸಿಂಗ್ ಬೋರ್ಡ್ ಮನೆಗಳು

೪೪. ಶ್ರೀ ಕೆ.ಹೆಚ್. ಹನುಮೇಗೌಡ (ಹಾಸನ).—ಮಾನ್ಯ ಬಂದರು ಮತ್ತು ಮೀನುಗಾರಿಕೆ ಹಾಗೂ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಾಸನ ಪಟ್ಟಣದ ಬೀರನಹಳ್ಳಿ ಕೆರೆಯ ಗೃಹ ಮಂಡಳಿಯು ಕಾಲೋನಿಯಲ್ಲಿ ಮಧ್ಯಮ ವರ್ಗ, ಕೆಳಮಧ್ಯಮ ವರ್ಗ, ಹಾಗೂ ಆರ್ಥಿಕವಾಗಿ ಹಿಂದುಳಿದ ವರ್ಗದವರಿಗೆ ಮನೆಗಳನ್ನು ಯಾವ ವರ್ಷದಲ್ಲಿ ಕಟ್ಟಿ, ಪ್ರತಿ ವರ್ಗದ ಮನೆಯೊಂದಕ್ಕೆ ಯಾವ ದರವನ್ನು ನಿಗದಿ ಮಾಡಿ ಅರ್ಜಿದಾರರುಗಳಿಗೆ ಮನೆಗಳನ್ನು ಹಂಚಲಾಯಿತು ?

ಆ) ಈ ರೀತಿ ಮನೆಗಳನ್ನು ಹಂಚಿದ ನಂತರ ಯಾವ ವರ್ಷಗಳಲ್ಲಿ ಈ ಮನೆಗಳಿಗೆ ಹೆಚ್ಚಿನ ದರವನ್ನು ನಿಗದಿ ಮಾಡಲಾಗಿದೆ ?

ಇ) ಪ್ರತಿ ಸಾರಿಯು ನಿಗದಿ ಮಾಡಿದ ದರಕ್ಕಿಂತ ಹೆಚ್ಚಿನ ದರವನ್ನು ನಿಗದಿ ಮಾಡಲು ಕಾರಣವೇನು ?

ಈ) ಈ ರೀತಿ ಹಂಚಿಕೆ ಮಾಡುವಾಗ ನಿಗದಿ ಪಡಿಸಿದ ದರಕ್ಕಿಂತ ಎರಡು ಅಥವಾ ಮೂರು ಪಟ್ಟು ಹೆಚ್ಚಿಸಿರುವುದರಿಂದ ಹಂಚಿಕೆದಾರರಿಗೆ ಹಣ ಕಟ್ಟಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮನೆಗಳ ನಿರ್ಮಾಣ ಕಾರ್ಯ ೧೯೭೪–೭೫ರಲ್ಲಿ ಪ್ರಾರಂಭವಾಗಿ ೧೯೮೨ ಡಿಸೆಂಬರ್ ತಿಂಗಳಿನಲ್ಲಿ ಪೂರ್ಣಗೊಳಿಸಲಾಯಿತು. ಪ್ರಾರಂಭದಲ್ಲಿ ಹಂಚಿಕೆಯ ಪ್ರಕಟಣೆಯ ಪ್ರಕಾರ ಮನೆಗಳಿಗೆ ನಿಗದಿ ಮಾಡಿದ ತಾತ್ಕಾಲಿಕ ದರವು ಈ ಕೆಳಕಂಡಂತೆ ಇರುತ್ತದೆ,

ಮಧ್ಯಮ ಆದಾಯವರ್ಗ	...	ರೂ ೩೪, ೫೦೦. ೦೦
ಅಲ್ಪ ಆದಾಯ ವರ್ಗ	...	ರೂ ೧೯, ೫೦೦. ೦೦
ಆರ್ಥಿಕವಾಗಿ ಹಿಂದುಳಿದ ವರ್ಗ	...	ರೂ ೯' ೫೦೦.೦೦